# ನಿಜ ನಟನೆ

'ಐ ಆ್ಯಮ್ ರೀಚಬಲ್'

ಹೀಗೆ ಸಂದರ್ಶನವೊಂದರಲ್ಲಿ ಅರ್ಜಿ ಗುಜರಾಯಿಸಿಕೊಳ್ಳುವ ಧಾಟಿಯಲ್ಲಿ ಮಾತನಾಡಿದ ನಟಿ ಒಂದು ಕಾಲದಲ್ಲಿ ತಮ್ಮ ವೃತ್ತಿಯ 'ವಾಸ್ತು' ಕೆಡಿಸಿಕೊಂಡಿದ್ದರು. ನೀಳಕಾಯದ ದೊಡ್ಡ ನಟನ ಸಿನಿಮಾದಲ್ಲಿ ಮೂರು ಶೇಡ್‌ಗಳ ಪಾತ್ರದಲ್ಲಿ ಅಭಿನಯಿಸಿದ್ದ ಸಂದರ್ಭ. ಆಗ ಅವರ ತಾಯಿಯ ಆರೋಗ್ಯ ದಿಢೀರನೆ ಕೈಕೊಟ್ಟಿತು. ಹಾಗಾಗಿ ಕೆಲದಿನಗಳ ಮಟ್ಟಿಗೆ ಅವರ ಫೋನ್ ನಾಟ್ ರೀಚಬಲ್. 'ದೇವರ ಆಟ ಹೇಗಿರುತ್ತದೆ ನೋಡಿ, ನನ್ನ ಅಮ್ಮನಿಗೆ ಆರೋಗ್ಯ ಕೈಕೊಟ್ಟಾಗಲೇ ದೊಡ್ಡ ದೊಡ್ಡ ನಟರ ಸಿನಿಮಾಗಳ ಆಫರ್ ಬರಬೇಕೆ? ಆಗ ನಾನು ರೀಚಬಲ್ ಇರಲಿಲ್ಲ. ಈಗ ಪಕ್ಕಾ ರೀಚಬಲ್... ಐ ಆ್ಯಮ್ ರೀಚಬಲ್' ಎಂದು ಹೇಳಿಕೊಂಡ ನಟಿ ಎಲ್ಲರಂಥವರಲ್ಲ. ಅವರು ಒಬ್ಬ ಸಾರ್ವಜನಿಕ ಸಂಪರ್ಕ ವ್ಯಕ್ತಿಯನ್ನು ಪ್ರಚಾರಕ್ಕೆಂದೇ ನಿಯೋಜಿಸಿಕೊಂಡಿದ್ದರು. ದೊಡ್ಡ ನಟರ ಸಿನಿಮಾ ಅವಕಾಶಕ್ಕೆ ಕರೆ ಬಂದಿತ್ತೋ ಇಲ್ಲವೋ ಎಂದು ಆ ನಟರಾಗಲಿ, ಅವರು ಅಭಿನಯಿಸಬೇಕಿದ್ದ ಸಿನಿಮಾದ ನಿರ್ದೇಶಕ–ನಿರ್ಮಾಪಕರಾಗಲಿ ಸ್ಪಷ್ಟಪಡಿಸಲೇ ಇಲ್ಲ. ನಟಿ ಮಾತ್ರ ತಮ್ಮ ಸಂಪರ್ಕ ತಂತ್ರಗಳನ್ನು ಒಂದೊಂದಾಗಿ ಪ್ರಯೋಗಿಸುತ್ತಾ ಹೋದರು. ಕನ್ನಡ ಅಷ್ಟಕ್ಕಷ್ಟೇ ಇದ್ದರೂ ತಮ್ಮ ವಾರಗೆಯ ಪರಭಾಷಾ ನಟಿಯರಿಗೆ ಹೋಲಿಸಿದರೆ ಬೇಗ ಇಲ್ಲಿನ ಭಾಷೆ ಕಲಿತರು ಎನ್ನಬೇಕು. ಇತ್ತೀಚಿನ ಒಂದು ಸಿನಿಮಾಗೆ ಅವರ ಮೊದ್ದು ಕನ್ನಡವನ್ನೇ ನಿರ್ದೇಶಕರು ಸಮರ್ಥವಾಗಿ ಬಳಸಿಕೊಂಡದ್ದೂ ಇದೆ.

ಕೈಲಿ ಇರುವ ಸಿನಿಮಾಗಳ ಸಂಖ್ಯೆ ಎಷ್ಟೆನ್ನುವುದನ್ನೂ ಮೀರಿ ಚಾಲ್ತಿಯಲ್ಲಿ ಇರಬಯಸುವ ನಟಿ ಅವರು. ಎರಡು ವರ್ಷಗಳ ಹಿಂದೆಯಂತೂ ಅವರು ಸುಖಾಸುಮ್ಮನೆ ಸುದ್ದಿಮಿತ್ರರಿಗೆ ಫೋನ್ ಮಾಡಿ, ಕುಶಲೋಪರಿ ವಿಚಾರಿಸುತ್ತಿದ್ದರು. ಮಾತಿನ ವರಸೆಯಲ್ಲಿ ತಮ್ಮ ಇಂದಿನ, ಮುಂದಿನ ಯೋಜನೆಗಳೇನು, ಕಾರ್ಯಕ್ರಮಗಳೇನು ಎಂದು ಪರೋಕ್ಷವಾಗಿಯೇ ವರದಿ ನೀಡುತ್ತಿದ್ದರು. ರಿಯಾಲಿಟಿ ಷೋಗಳಲ್ಲಿ ನಟಿಸಿದ, ಹಿಂದಿ ಧಾರಾವಾಹಿಯಲ್ಲಿ ಅಭಿನಯಿಸಿದ ಅನುಭವ ಬೆನ್ನಿಗಿಕ್ಕಿಕೊಂಡು ಕನ್ನಡ ಸಿನಿಮಾ ರಂಗಕ್ಕೆ ಬರುವ ಮೊದಲು ಅವರು ತಮಿಳು, ಮಲಯಾಳಂ ಸಿನಿಮಾದ ಓಣಿಗಳನ್ನೂ ನೋಡಿದ್ದರು. ತಮಿಳಿನಲ್ಲಿ ಧನುಷ್ ತರಹದ ಜನಪ್ರಿಯ ನಟನೊಂದಿಗೆ ಅಭಿನಯಿಸಿದ ಹಿನ್ನೆಲೆ ಇಲ್ಲಿ ಅವಕಾಶಕ್ಕೆ ಅರ್ಜಿ ಹಾಕಿಕೊಳ್ಳಲು ಸಾಕಾಯಿತು.

ತಮಿಳು ನೆಲದಲ್ಲಿ ನಿಂತಾಗ ಅಲ್ಲಿನ ಅಭಿಮಾನಿಗಳನ್ನು ದೇವರೆಂದು ಕೊಂಡಾಡಿದ ನಟಿಯದ್ದು ನಿಜ ಬದುಕಿನಲ್ಲಿಯೂ ಸಹಜಾಭಿನಯ. 'ಕನ್ನಡದಲ್ಲಿ ನಟಿಯಾಗಲು ಯಾವುದೋ ನಟನ ಸಂಬಂಧಿಯೋ, ತಂಗಿಯೋ ಆಗಿರಬೇಕಾಗಿಲ್ಲ. ಅದಕ್ಕೇ ಈ ಚಿತ್ರರಂಗವೆಂದರೆ ನನಗೆ ಇಷ್ಟ' ಎಂದು ತಮ್ಮ ನಟನಾ ಕೌಶಲವನ್ನು ವ್ಯಕ್ತಪಡಿಸಿದ್ದಿದೆ. ಹಾಗೆ ನೋಡಿದರೆ ಇವರು ನಿರ್ದೇಶಕರ ನಟಿ. ನಿರ್ದೇಶಕ ಗಟ್ಟಿಯಾಗಿದ್ದರಷ್ಟೇ ಇವರಿಂದ ಕೆಲಸ ತೆಗೆಸಲು ಸಾಧ್ಯ. ನೀಳಕಾಯದ ನಟಿಗೆ ಪಾತ್ರದ ಆಳ–ಅಗಲದ ಕುರಿತು ಅಷ್ಟೇನೂ ಚಿಂತೆ ಇಲ್ಲ. ರೂಪದರ್ಶಿಯೂ ಆಗಿರುವ ಅವರು ಇತ್ತೀಚೆಗೆ ಸೀರೆಯೊಂದರ ಜಾಹೀರಾತಿನ ಹೋರ್ಡಿಂಗ್‌ನಲ್ಲಿ ಚಿತ್ರವಾದರು. ಅದರ ಎದುರು ನಿಂತು ಸೆಲ್ಫಿ ತೆಗೆದುಕೊಂಡು ಪುಳಕಗೊಳ್ಳುವಷ್ಟು ಮಗುವಿನ ಮನಸ್ಸು ಅವರದ್ದು.

**● ವಿಶಾಖ ಎನ್.**

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68